(*b*) if not, the stage at which the scheme is pending at present ;

(*c*) the time required by them to complete the water supply scheme to Raichur Town ?

A.— Sri R. M. PATIL (Minister for Home and Municipal Administration).—

(*a*) Yes.

(*b*) Does not arise.

(*c*) Within three years from the date of implementation.

ಶ್ರೀ ಎಂ. ನಾಗಪ್ಪ.—ಇಂಪ್ಲಿಮೆಂಟೇಷನ್ ಆದ ತಾರೀಖಿನಿಂದ ಮೂರು ವರ್ಷಗಳಲ್ಲಿ ಈ ಯೋಜನೆ ಪೂರ್ತಿಯಾಗುತ್ತದೆ ಎಂದು ಉತ್ತರ ಹೇಳಿದೆ. ಇಂಪ್ಲಿಮೆಂಟೇಷನ್ ಆಗುವುದಕ್ಕೆ ಎಷ್ಟು ವರ್ಷವಾಗುತ್ತದೆ ?

ಶ್ರೀ ಆರ್. ಎಂ. ಪಾಟೀಲ್.—ಲೈಫ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್ ಅವರು ಈ ಸಾಲದ ಫಸ್ಟ್ ಇನ್‌ಸ್ಟಾಲ್‌ಮೆಂಟ್ ಎಂಟು ಲಕ್ಷ ರೂಪಾಯಿ ಕೊಟ್ಟರೆ ಇದೇ ವರ್ಷ ಕೆಲಸ ಪ್ರಾರಂಭವಾಗುತ್ತದೆ.

ಶ್ರೀ ಎಂ. ನಾಗಪ್ಪ.—ರಾಯಚೂರು ಮುನಿಸಿಪಾಲಿಟಿಯ 16 ಲಕ್ಷ ರೂಪಾಯಿ ಸ್ಕೀಂ ಇಟ್ಟು ಕೊಂಡು ರಿಜರ್ವಾಯರ್ ಕಟ್ಟಿಸುವ ಕೆಲಸ ಎರಡು ವರ್ಷದಿಂದ ನಡೆದಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಗಮನಕ್ಕೆ ಬಂದಿದೆ. ಅದು ಎಕ್ಸಪೆಡೈಟ್ ಆಗುತ್ತದೆ. ಸ್ವಲ್ಪ ದಿವಸದಲ್ಲಿ ಕೆಲಸ ಮುಗಿಯುತ್ತದೆ.

ಶ್ರೀ ಎಂ. ನಾಗಪ್ಪ.—ಬಳ್ಳಾರಿಯಲ್ಲಿಯ ಸಬ್ ಡಿವಿಜನ್ ಅದನ್ನು ರಾಯಚೂರಿಗೆ ಯಾವಾಗ ಟ್ರಾನ್ಸಫರ್ ಮಾಡುತ್ತೀರಿ ?

ಶ್ರೀ ಆರ್. ಎಂ. ಪಾಟೀಲ್.—ಎಲ್.ಐ.ಸಿ. ಹಣ ಮಂಜೂರು ಮಾಡಿದೆ. ಹಣ ಬಂದ ಕೂಡಲೆ ಸಬ್ ಡಿವಿಜನ್ ಮಾಡುವುದಕ್ಕೆ ಆ ಪ್ರಕಾರ ವ್ಯವಸ್ಥೆ ಮಾಡಬೇಕಾಗುತ್ತದೆ. ಬೇರೆ ಸಬ್ ಡಿವಿಜನ್ ಕ್ರಿಯೇಟ್ ಮಾಡಕ್ಕಂಥ ಪ್ರಸಂಗ ಬಂದರೂ ಮಾಡುತ್ತೇವೆ.

ಶ್ರೀ ಎಸ್. ಎಂ. ಗುರೆಡ್ಡಿ.—ರಾಯಚೂರು ನಗರಕ್ಕೆ ಕೃಷ್ಣಾ ನದಿಯಿಂದ ನೀರು ಒದಗಿಸುವ ವ್ಯವಸ್ಥೆ ಮಾಡುತ್ತೀರಾ ? ತುಂಗಭದ್ರಾ ಕಾಲುವೆ ನೀರು ಹತ್ತಿರವಿಲ್ಲವೆಯೇ ಹರಿದು ಹೋಗುತ್ತದೆ. ಅದರಿಂದ ನೀರು ತರುವ ಸ್ಕೀಂ ಆಗಿದೆಯೇ ? ಅಥವಾ ಕೃಷ್ಣಾ ನೀರು ತರುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಹೊಸದಾಗಿ ಮಾಡಿರುವ ತುಂಗಭದ್ರಾ ಕಾಲುವೆ ನೀರು ಎರಡೂವರೆ ಮೈಲು ದೂರದಲ್ಲಿದೆ. ಈ ಕಾಲುವೆ ನೀರು ಸರಬರಾಜು ಮಾಡುವ ವ್ಯವಸ್ಥೆಯಾಗುತ್ತದೆ.

Re-opening of M.S.K. Mills, Gulbarga

95. Sri DIGAMBARA RAO B. KALMANKAR (Aland).—

Will the Minister for Finance, Planning and Commerce and Industries be pleased to state :—

(*a*) whether it is a fact that the M.S.K. Mills of Gulbarga is to be re-opend shortly and if so, whether it is going to be given on lease to private sector ;

(*b*) if it is to be given to Private Sector, who has agreed to take on lease and on what terms ?

A.—**Sri RAMAKRISHNA HEGDE** (Minister for Finance, Planning and Commerce and Industries).—

(*a*) Yes. The Mills will be re-opened shortly. Its technical management is proposed to be entrusted to M/s. K. R. Miils, Mysore, but not on lease.

(*b*) M/s. K.R. Mills, Mysore, have come forward to assist in the management of the M.S.K. Mills. There is no proposal to give it on lease.

Sri DIGAMBARA RAO B. KALMANKAR.—Whether it has come to the notice of the Government that this mill was to be handed over to one Khadiwal Brothers, New Delhi ?

Sri RAMKRISHNA HEGDE.—This mill has not been handed over to anybody except for technical management.

Sri C. K. RAJAIAH SETTY.—In view of the fact that Krishnarajendra Mills is going to assist, what is the remuneration you pay to that Mill ?

Sri RAMAKRISHNA HEGDE.—The technical director will got Rs. 500 per month and T.A. The K.R. Mills will get 3·1/4 per cent commission on the sales of the cloth produced in this mill.

ಶ್ರೀ ಎಸ್. ಎಂ. ಗುರೆಡ್ಡಿ.—ಎಂ. ಎಸ್. ಕೆ. ಮಿಲ್ಲನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಸಾಕಷ್ಟು ಬಂಡವಾಳವನ್ನು ಹಾಕಿದ್ದಾರೆ. ಆದರೂ ಕೂಡ ಹೊಸ ಮೆಷಿನರಿ ತರಲೆ ಪುನರ್ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಹೊಸ ಮೆಷಿನರಿ ತೆಗೆದುಕೊಳ್ಳುವ ವ್ಯವಸ್ಥೆ ಇದೆಯೇ ಅಥವಾ ಇದ್ದುದರಲ್ಲಿಯೇ ಅದನ್ನು ನಡೆಸುವ ಪ್ರಯತ್ನ ಮಾಡುತ್ತೀರಾ ಸ್ವಾಮಿ ?

ಶ್ರೀ ರಾಮಕೃಷ್ಣ ಹೆಗಡೆ.—ಅವರ ಅಭಿಪ್ರಾಯ ಯಾವರೀತಿ ಬರುತ್ತದೆಯೋ ಅದನ್ನು ನೋಡಿಕೊಂಡು ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಈಗಿರತಕ್ಕ 36 ಸಾವಿರ ಸ್ಪಿಂಡಲ್‌ಗಳಲ್ಲಿ ಸುಮಾರು 12 ಸಾವಿರ ಸ್ಪಿಂಡಲ್‌ಗಳಲ್ಲಿ ಈಗಿರುವ ಸ್ಥಿತಿಯಲ್ಲಿಯೇ ನಾವು ಕೆಲಸ ಮಾಡಬಹುದು ಮತ್ತು 15 ಸಾವಿರ ಸ್ಪಿಂಡಲ್‌ಗಳನ್ನು ಹೊಸದಾಗಿ ಖರೀದಿ ಮಾಡಿಕೊಂಡು ಕೆಲಸ ಮಾಡಬೇಕಾಗುತ್ತದೆ ಎಂದು ಕಾಣುತ್ತದೆ.

ಶ್ರೀ ಎಂ. ಕಲ್ಯಾಣರಾವ್.—ಈ ಗಿರಣಿಯನ್ನು ಎಷ್ಟು ದಿವಸದೊಳಗಾಗಿ ಪ್ರಾರಂಭ ಮಾಡುತ್ತೀರಿ ಎನ್ನುವುದನ್ನು ಖಚಿತವಾಗಿ ಹೇಳಬಹುದೋ ?

ಶ್ರೀ ರಾಮಕೃಷ್ಣ ಹೆಗಡೆ.—ಈಗಾಗಲೇ ಪ್ರಾರಂಭಕ್ಕೆ ಕೆಲಸಗಳು ಶುರುವಾಗಿವೆ. ಅದಷ್ಟು ಬೇಗ ಕೆಲಸ ಶುರುವಾಗುತ್ತದೆ.

ಶ್ರೀ ಶರಣಗೌಡ ಇನಾಂದಾರ್.—ಸರ್ಕಾರದವರು ಟೆಕ್ನಿಕಲ್ ಮ್ಯಾನೇಜ್‌ಮೆಂಟ್ ನಲುವಾಗಿ ಮೈಸೂರು ಕೆ. ಆರ್. ಮಿಲ್‌ನವರಿಗೆ ಕೊಟ್ಟಿರುವುದಾಗಿ ಹೇಳಿದರು. ಮೊದಲು ನಿಮ್ಮಲ್ಲಿರುವ ಆಡಳಿತಾಧಿಕಾರಿಯೊಬ್ಬರನ್ನು ಟೆಕ್ನಿಕಲ್ ನಾಲೆಜ್ ಮತ್ತು ಬೇರೆ ಸಂಬಂಧಪಟ್ಟ ವಿಚಾರಗಳನ್ನು ತಿಳಿದು ಬರಲು 40 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ವಿದೇಶಗಳಿಗೆ ಕಳಿಸಿದ್ದಿರಿ. ಈ ಅಧಿಕಾರಿಯನ್ನು ತೆಗೆದುಕೊಳ್ಳುವುದಕ್ಕೆ ಏನು ಅಭ್ಯಂತರವಿದೆ ?

ಶ್ರೀ ರಾಮಕೃಷ್ಣ ಹೆಗಡೆ.—ಅವರ ಸರ್ವಿಸ್ ಅಗತ್ಯವಿದ್ದರೆ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಸಿದ್ದವೀರಪ್ಪ.—ಈ ಮಿಲ್ಲಿಗೆ ಈಗಾಗಲೇ ಸರ್ಕಾರದವರು ಸುಮಾರು 180 ಲಕ್ಷ ರೂಪಾಯಿಗಳನ್ನು ಸುರಿದು ಮಣ್ಣು ಮುಚ್ಚಿರುವುದು ಗೊತ್ತಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—180 ಲಕ್ಷ ರೂಪಾಯಿಗಳನ್ನು ಸುರಿಯಲಿಲ್ಲ. ಒಟ್ಟು ಕೊಟ್ಟಿರತಕ್ಕ ಸಾಲ ಮತ್ತು ಅದರಲ್ಲಿ ಹಾಕಿರುವ ಬಂಡವಾಳ 150 ಲಕ್ಷ ರೂಪಾಯಿ ಆಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಇದಕ್ಕೆ ಸರ್ಕಾರದವರು ಸಾಲ ಕೊಟ್ಟಿರುವುದು 127 ಲಕ್ಷ ರೂಪಾಯಿ, ಸಿಂಡಿಕೇಟ್ ಬ್ಯಾಂಕಿನವರು ಕೊಟ್ಟಿರುವುದು 40 ಲಕ್ಷ ರೂಪಾಯಿ, ಫೈನಾನ್ಸ್ ಕಾರ್ಪೋರೇಷನ್ ಕೊಟ್ಟಿರುವುದು 10 ಲಕ್ಷ ರೂಪಾಯಿ, ಡಿಬೆಂಚರ್ ಸಾಲ ಎತ್ತಿರುವುದು ಸಾಲೂ ವರೆ ಲಕ್ಷ ರೂಪಾಯಿ. ಇಪ್ಪೆಲ್ಲವನ್ನೂ ಕೂಡಿಸಿದರೆ ಎಷ್ಟಾಗುತ್ತದೆ? ನಾನು ಹೇಳಿರುವುದು ನಿಜವೋ, ಅಲ್ಲವೋ? ಅದರ ಮೇಲೆ 1966ನೆ ಇಸವಿಯಲ್ಲಿ ಇಂಡಿಯಾ ಸರ್ಕಾರದವರು ಈ ಮಿಲ್ಲಿನ ಆಡಳಿತದ ವಿಚಾರದಲ್ಲಿ ಒಂದು ಕಮಿಟಿಯನ್ನು ನೇಮಿಸಿದ್ದು ನಿಮಗೆ ಗೊತ್ತಿದೆಯೇ?

ಶ್ರೀ ರಾಮಕೃಷ್ಣ ಹೆಗಡೆ.—ಕಮಿಟಿಯನ್ನು ನೇಮಿಸಿರಬಹುದು.

ಶ್ರೀ ಎಚ್. ಸಿದ್ದವೀರಪ್ಪ.—ಕಮಿಟಿಯವರು ಈ ಮಿಲ್ಲನ್ನು ಲಿಕ್ವಿಡೇಟ್ ಮಾಡದೆ ಯಾವ ರೀತಿಯಿಂದಲೇ ಆಗಲಿ ಜೀವ ತುಂಬುವುದಕ್ಕೆ ಸಾಧ್ಯವಿಲ್ಲ, ಸತ್ತು ಹೋಗಿರುವ ಹೆಣ, ಇದಕ್ಕೆ ಏನು ಮಾಡಿದರೂ ಜೀವ ತುಂಬುವುದಿಲ್ಲ, ಲಿಕ್ವಿಡೇಷನ್ ಮಾಡಲಿಕ್ಕೇ ಬೇಕು ಎಂದು ರಿಪೋರ್ಟಿನಲ್ಲಿ ತಿಳಿಸಿದ್ದಾರೆಯೇ!

ಶ್ರೀ ರಾಮಕೃಷ್ಣ ಹೆಗಡೆ.—ಆ ರಿಪೋರ್ಟು ಈಗ ನನ್ನ ಮುಂದೆ ಇಲ್ಲ. ಆದ್ದರಿಂದ ಅದರಲ್ಲಿ ಏನು ಹೇಳಿದ್ದಾರೆಂದು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಕೃಷ್ಣರಾಜೇಂದ್ರ ಮಿಲ್‌ನವರಿಗೆ ಟೆಕ್ನಿಕಲ್ ಮ್ಯಾನೇಜ್‌ಮೆಂಟ್ ಕೊಟ್ಟಿದ್ದೀರಿ. ಅವರು ಇದರಲ್ಲಿ ಒಂದು ಪೈಸೇ ಬಂಡವಾಳವನ್ನೂ ಹಾಕಿಲ್ಲ ಎನ್ನುವುದು ನಿಜವೇ?

ಶ್ರೀ ರಾಮಕೃಷ್ಣ ಹೆಗಡೆ.—ಎರಡು ಲಕ್ಷ ರೂಪಾಯಿ ಷೇರು ಬಂಡವಾಳವನ್ನು ಹಾಕುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆ ಇದ್ದ ಎಂ. ಎಸ್. ಕೆ. ಮಿಲ್ ಖಾಸಗಿ ಮಾಲೀಕರ ಕೈಯಲ್ಲಿದ್ದು, ಆಗ ಅವರಲ್ಲಿ ಒಳಜಗಳವಾಗಿ ದುಡ್ಡು ನುಂಗಿ ಹಾಕಿದರು. ಸರ್ಕಾರದವರು ಇದನ್ನು ಈಗ ತೆಗೆದುಕೊಂಡು ಲಕ್ಷಾಂತರ ರೂಪಾಯಿ ಹಾಕಿವ್ವಾರೆ. ಈವಾಗ ಮತ್ತೆ ಬೇರೆ ಪ್ರೈವೇಟ್ ಪಾರ್ಟಿ ಹೆಸರಿಗೆ ಕೊಟ್ಟಿದ್ದಾರೆ. ಈ ಮಿಲ್ ನಿಜವಾಗಿ ಕೆಲಸ ಮಾಡಿ, ಮತ್ತೊಬ್ಬರ ದುಡ್ಡು ಕೊಟ್ಟಿರುವುದನ್ನು ನುಂಗುವುದಿಲ್ಲ ಎನ್ನುವುದಕ್ಕೆ ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

2-00 P.M.

ಶ್ರೀ ರಾಮಕೃಷ್ಣ ಹೆಗಡೆ.—ಕೊಟ್ಟಿರುವ ಹಣ ಉಳಿಸಬೇಕೆಂಬ ಉದ್ದೇಶದಿಂದ ಯಾರಿಗೆ ಅನುಭವವಿದೆ ಅವರ ಅನುಭವದ ಸಹಾಯ ಪಡೆದು ಪುನಃ ಈ ಮಿಲ್ಲನ್ನು ನಡೆಸಬೇಕೆಂದು ತೀರ್ಮಾನ ಮಾಡಿದ್ದೇವೆ.

Sri H. SIDDAVEERAPPA.— This is a very serious matter. I am requesting the Government, before they proceed further, they are now contemplating, I understand, to invest another 50 lakhs. ಇಲಾಖೆಯವರು ಕೊಡುವುದಕ್ಕೆ ಅವಕಾಶವಿಲ್ಲವೆಂದರೆ ಕೊಡಬೇಕೆಂದಿದ್ದೀರಿ. ಅವರಿಗೂ ಇವರಿಗೂ ಏನೋ ಹೊಂದಾಣಿಕೆ ಇದೆ. ಯಾರು ಅವರಿಗೆ ಕೊಡಬೇಕೆಂದಿದ್ದಾರೋ ಅವರಿಗೂ ಇವರಿಗೂ ಹೊಂದಾಣಿಕೆ ಇದೆ. ಆದುದರಿಂದ ಇಂಥ ಅನ್ಯಾಯದ ಕೆಲಸ ಮಾಡುವಾಗ ಈ ಸಭೆಯ ಮುಂದೆ ವಿವರಗಳನ್ನಿಡಬೇಕು, ಏನು ಅಗ್ರಿಮೆಂಟ್ ಮಾಡಿಕೊಳ್ಳಬೇಕೆಂದಿದ್ದಾರೆ ಎಂಬುದನ್ನು ತಿಳಿಸಬೇಕು. ಇದು 1884 ರಲ್ಲಿ ಸ್ಥಾಪನೆಯಾದ ಮಿಲ್ಲು. ಇದೆಲ್ಲಾ ಕೊಟ್ಟರೆ ಸರಿಯಾಗಿ ಕೆಲಸ ನಡೆಯುತ್ತದೆಂದು ಭರವಸೆ ಕೊಡಬಲ್ಲರಾ?

Sri RAMAKRISHNA HEGDE.—I take very serious exception to the insinuation made by the hon'ble member.

ಹೊಂದಾಣಿಕೆ ಅವರಿಗೂ ಇವರಿಗೂ ಇದೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಸಂಬಂಧಪಟ್ಟ ಅಂಕಿಅಂಶಗಳು ಬೇಕಾದರೆ ಕೊಡುವುದಕ್ಕೆ ತಯಾರಿದ್ದೇವೆ. ಸುಮ್ಮನೆ ಮನಸ್ಸಿಗೆ ಬಂದಹಾಗೆ ಹೇಳಿದರೆ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಮಂತ್ರಿಗಳು ಸಾಹಿತ್ಯವಿದೆ ಒದಗಿಸುತ್ತೇನೆಂದು ಹೇಳಿದ್ದು ಒಂದೇ ಸಾಕು ಇಂಪೀಚ್‌ಮಾಡುವುದಕ್ಕೆ. ಅವರು ಇಲ್ಲಿ ಕೊಡುವುದು ಮುಖ್ಯವಲ್ಲ.

ಶ್ರೀ ಶರಣಗೌಡ ಇನಾಂದಾರ್.—ಇದು ಗುಲ್ಬರ್ಗ ಜಿಲ್ಲೆಯ ವಿಚಾರವಾದ್ದರಿಂದ ನಮಗೆ ಸಂಬಂಧಪಟ್ಟಿದೆ. ಎಲ್ಲರಿಗೂ ಪ್ರಶ್ನೆ ಕೇಳಲು ಅವಕಾಶ ಕೊಟ್ಟು ನಮಗೆ ಕೊಡದಿದ್ದರೆ ಹೇಗೆ ? ನಾನು ಒಂದು ಸಪ್ಲಿಮೆಂಟರಿ ಕೇಳಬೇಕಾಗಿದೆ. ಲಕ್ಸಿಡೇಷನ್ನಿಗೆ ಹೋಗುವಾಗ ಎಷ್ಟು ಬಂಡವಾಳ ಮಿಲ್ಲನದಿತ್ತು ಎಂದು ನಿರ್ಧರವಾಗಿದೆ ? ಎರಡನೆಯದು ಪುನಃ ಈಗ ಎಷ್ಟು ಬಂಡವಾಳ ಹಾಕಲಾಗುವುದು ? ಅಂದರೆ ಸರಕಾರವೆಷ್ಟು ಖಾಸಗಿ ಬಂಡವಾಳವೆಷ್ಟು ? ಮೂರನೆಯದು ಸರಕಾರ ಇಷ್ಟು ಬಂಡವಾಳ ಹಾಕಿ ಪುನಃ ವಾರ್ಷಿಯರ್ ಕಂಟ್ರೋಲ್ ಮಾಡುವುದಕ್ಕೆ ಕಾರಣವೇನು ಪೂರ್ಣವಾಗಿ ಕಂಟ್ರೋಲ್ ಮಾಡಿ ನಡೆಸುವುದಕ್ಕೇನು ತೊಂದರೆ ?

ಶ್ರೀ ರಾಮಕೃಷ್ಣ ಹೆಗಡೆ.—ಲಕ್ಸಿಡೇಷನ್ ಮಾಡುವ ವಿಚಾರ ಸರಕಾರದ್ದಲ್ಲ.

ಶ್ರೀ ಶರಣಗೌಡ ಇನಾಂದಾರ್.—ಅದಲ್ಲ. ನೀವು ಲಕ್ಸಿಡೇಷನ್ ಮಾಡಿದಿರಿ, ಕಾಂಪೆನ್ಸೇಷನ್ ಕೊಟ್ಟಿಲ್ಲ. ಈಗ ಮಿಲ್ಲಿನ ಬಂಡವಾಳವೆಷ್ಟಿದೆ ಎಂದು ಗೊತ್ತುಮಾಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಲಕ್ಸಿಡೇಷನ್ ಮಾತಿಲ್ಲ ಲಕ್ಸಿಡೇಷನ್ನಿಗೆ ಹೋಗಬಾರದು, ಸರಕಾರ ಹಾಕಿರುವ ಹಣ ಬರುವಂತೆ ನೋಡಿಕೊಳ್ಳಬೇಕು, ಮಿಲ್ಲನ್ನು ಅದಕ್ಕಾಗಿ ನಡೆಸಬೇಕು ಎಂದು ಸರಕಾರ ನಿರ್ಧಾರಮಾಡಿದೆ. ಹೊಸದಾಗಿ ನಡೆಸುವುದಕ್ಕೆ 35 ಲಕ್ಷ ರೂಪಾಯಿ ಮತ್ತೆ 11 ಲಕ್ಷ ಬೇಕು. ಇದಕ್ಕೆ ಬ್ಯಾಂಕಿನ ಮೂಲಕ ವ್ಯವಸ್ಥೆಮಾಡುವುದಾಗಿ ಹೇಳಿದೆ.

ಶ್ರೀ ಶರಣಗೌಡ ಇನಾಂದಾರ್.—ಇಷ್ಟು ಹಣ ಸರಕಾರ ಹಾಕಿ ಸರಕಾರ ಮತ್ತು ಖಾಸಗಿಯವರು ಕೂಡಿ ಮಾಡುವುದಕ್ಕಿಂತ ಸರಕಾರವೇ ನೇರವಾಗಿ ನಡೆಸುವುದಕ್ಕೆ ತೊಂದರೆಯೇನು ?

ಶ್ರೀ ರಾಮಕೃಷ್ಣ ಹೆಗಡೆ.—ಸರಕಾರ ನಡೆಸುವುದಕ್ಕೆ ಸಾಧ್ಯವಿಲ್ಲವೆಂದು ತೀರ್ಮಾನಿಸಲಾಗಿದೆ. ಏಕೆಂದರೆ 3—4 ವರ್ಷಗಳಿಂದ ನಡೆಸಿಲ್ಲ. ಇದಕ್ಕೆ ಬೇಕಾದ ಹಣವಾಗಲಿ ಅಥವಾ ಕೆಲಸ ಮಾಡುವ ಸ್ಕಿಲ್ ಉಳ್ಳ ಆಫೀಸರುಗಳಾಗಲಿ ನಮ್ಮಲ್ಲಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಇಂಡಿಯಾ ಸರಕಾರವ ವರವಿಗೆ ವಿರುದ್ಧವಾಗಿ ಹೀಗೆ ಮಾಡುತ್ತಿದ್ದೀರಲ್ಲವೇ ?

Mr. DEPUTY SPEAKER.—Question hour is over. Now Short Notice Question No. 5.

SHORT NOTICE QUESTION AND ANSWER

Water Supply in Deodurg

4. Sri SADASHIVAPPA PATIL (Deodurg).—

Will the Minister for Home and Municipal Administration be pleased to state :—

(*a*) whether the Government is aware that there is no water in the wells of Deodurg Town;

(*b*) if so, what alternative arrangement is made by the Government for supply of water ?

A.—Sri R. M. PATIL (Minister for Home and Municipal Administration).—

(*a*) No.

(*b*) The question of sanctioning a water supply scheme for Deodurg Town is under consideration. In the meanwhile, arrangement for providing water supply to the town will have to be made by the Town Municipal Council.